# <u>ಸಂಗಂ ಸಾಹಿತ್ಯ</u>

ಭಾರತದಲ್ಲಿನ ಸಾಹಿತ್ಯದ ಚರಿತ್ರೆ ಮತ್ತು ಶ್ರೇಷ್ಟತೆಯ ಚರ್ಚೆ ಬಂದಾಗಲೆಲ್ಲ ಸಂಸ್ಕೃತದೊಂದಿಗೆ ತಮಿಳಿನ ಸಂಗಂ ಸಾಹಿತ್ಯ ಸ್ಥಾನ ಗಳಿಸಿಕೊಂಡಿರುತ್ತದೆ. ಸಂಗಂ ಸಾಹಿತ್ಯ ಬೇರೆಲ್ಲ ಸಾಹಿತ್ಯಗಳಿಗಿಂತ ಬಹು ಪುರಾತನವಾದುದು ಮತ್ತು ತಮಿಳು ಭಾಷೆಯು ವಿಶ್ವ ಸಾಹಿತ್ಯಕ್ಕೆ ನೀಡಿದ ಕೊಡುಗೆಯೆಂದು ಹೇಳಲಾಗುತ್ತದೆ. ಇದರೊಂದಿಗೆ ಇದಕ್ಕೆ ಅನನ್ಯ ಪ್ರಾಚೀನತೆಯೂ ದೊರೆತಿದೆ.

ತಮಿಳು ಸಾಹಿತ್ಯ ಬಹಳ ಪ್ರಾಚೀನವಾದುದು. ಇದು ಪಾಂಡ್ಯರಿಂದ ಸ್ಥಾಪಿಸಲ್ಪಟ್ಟ ಮೂರು ಸಂಘಗಳ ಆಶ್ರಯದಲ್ಲಿ ಬೆಳೆಯಿತೆಂಬ ಐತಿಹ್ಯವಿದೆ. ಈ ಸಾಹಿತ್ಯವನ್ನು ಅನುಕೂಲಕ್ಕಾಗಿ ಸಂಗಂ ಸಾಹಿತ್ಯ ಎಂದು ಕರೆಯಲಾಗುತ್ತದೆ. ವಿದ್ವಾಂಸರಲ್ಲಿ ಈ ನಾಮಕರಣದ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ರೂಢಿಯ ದೃಷ್ಟಿಯಿಂದ ಇದು ವ್ಯಾಪಕವಾಗಿ ಬಳಕೆಯಾಗುತ್ತಿದೆ. ಇದನ್ನು ಸಹಜ ಸಾಹಿತ್ಯದ ಕಾಲವೆಂದು ವಿದ್ವಾಂಸರು ಗುರುತಿಸಿದ್ದಾರೆ. ಇದನ್ನು ಪೋಷಿಸಿದವರು ಆದಿ ಚೇರ, ಚೋಳ ಮತ್ತು ಪಾಂಡ್ಯರು.

ಪಾಣಾರ್ ಎಂಬ ವೃತ್ತಿ ಗಾಯಕರ ಮೌಖಿಕ ಕಾವ್ಯವೇ ಸಂಗಂ ಸಾಹಿತ್ಯ.  ಮೌಖಿಕವಾಗಿದ್ದ ಈ ಸಾಹಿತ್ಯ ನಂತರದಲ್ಲಿ ಲಿಪಿಕರಣಗೊಂಡಿತು. 13-14 ನೇ ಶತಮಾನದಲ್ಲಿ ಈ ಸಾಹಿತ್ಯ ವರ್ಗೀಕೃತಗೊಂಡಿರುವ ಸಾಧ್ಯತೆಗಳಿವೆ. ಲಿಪಿಕರಣಗೊಂಡ ಸುಮಾರು ಸಾವಿರ ವರ್ಷಗಳ ಕಾಲ ಜನ ಮಾನಸದಿಂದ ದೂರವಾಗಿ ತೆರೆಮರೆಗೆ ಸರಿದಿದ್ದ ಈ ಸಾಹಿತ್ಯ ಪ್ರ.ಶ 19 ನೇ ಶತಮಾನದ ಅಂತ್ಯದ ವೇಳೆಗೆ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹದ ಮೂಲಕ ಮತ್ತೊಮ್ಮೆ ಬೆಳಕಿಗೆ ಬಂದಿತೆಂದು ಹೇಳಲಾಗುತ್ತಿದೆ. ಆದ್ದರಿಂದ ಇದಾದ ನಂತರವೇ ಸಂಗಂ ಸಾಹಿತ್ಯದ ಮೇಲಿನ ಭಾಷ್ಯಗಳು ದಕ್ಕುತ್ತವೆ.

ತಮಿಳಿನ ಆರಂಭಿಕ ಸಾಹಿತ್ಯ ಎಟ್ಟುತ್ತೊಕ್ಕೈ (ಎಂಟು ಸಂಗ್ರಹಗಳು) ಹಾಗೂ ಪತ್ತುಪ್ಪಾಟ್ಟು (ಹತ್ತು ಹಾಡುಗಳು) ಒಳಗೊಂಡಿರುವ ಪದಿನೇಣ್ ಮೇಲ್ಕಣಕ್ಕುಗಳಲ್ಲಿ (ಹದಿನೆಂಟು ಮೇಲ್ ಗಣಗಳು) ನಿರೂಪಿತವಾಗಿದೆ. ಇದರ ಪಟ್ಟಿ ಹೀಗಿದೆ.

ಅ ಅಗತ್ತಿಯಂ ಮತ್ತು ತೊಲ್‌ಕಾಪ್ಪಿಯಂ ವ್ಯಾಕರಣ ಗ್ರಂಥಗಳು.

ಆ. ಪದಿನೇಣ್ ಮೇಲ್‌ಕಣಕ್ಕು (ಹದಿನೆಂಟು ಮೇಲ್‌ಗಣಗಳು ) = ಎಟ್ಟುತ್ತೊಕ್ಕೈ (8) + ಪತ್ತುಪ್ಪಾಟ್ಟು(10)

ಎಟ್ಟುತ್ತೊಕ್ಕೈ (ಎಂಟು ಸಂಗ್ರಹ)

(೧)  ನಟ್ರಿಣೈ - ನಲ್ ತಿಣೈ(ಗಳ ಕವನ ಸಂಗ್ರಹ)

(೨)  ಕುರುಂತೊಗೈ- ಕಿರು(ಕವನಗಳ) ಸಂಗ್ರಹ

(೩)  ಐನ್‌ಕುರುನೂರು-ಐನೂರು ಕಿರು ಪದ್ಯಗಳು

(೪) ಪದಿರುಪ್ಪತ್ತು-ಹತ್ತರಹತ್ತು

(೫) ಪರಿಪಾಡಲ್- ಪರಿ(ಛಂದಸ್ಸಿನ) ಹಾಡುಗಳು

(೬) ಕಲಿತ್ತೊಗೈ-ಕಲಿ (ಛಂದಸ್ಸಿನ) ಸಂಗ್ರಹ

(೭) ಅಹನಾನೂರು ಅಥವಾ ನೆಡುಂತೊಕ್ಕೈ – ಅಹಂ ನಾನೂರು (ಕವನಗಳು) ಅಥವಾ ದೀರ್ಘ(ಕವನಗಳ) ಸಂಗ್ರಹ

(೮) ಪುರನಾನೂರು-ಪುರ ನಾನೂರು (ಕವಿತೆಗಳು)

ಪತ್ತುಪ್ಪಾಟ್ಟು (ಹತ್ತು ಹಾಡುಗಳು)

(೧) ತಿರುಮುರುಗಾರ್ರುಪ್ಪಾಟ್ಟೈ(ತಿರುಮುರುಗಾಟ್ಟುಪ್ಪಾಡೈ)-ತಿರುಮುರುಗನೆಡೆಗೆ ಮಾರ್ಗದರ್ಶನ (ನಕ್ಕೀರಾರ್)

(೨) ಪುರನಾರಾರ್ರುಪ್ಪಾಟ್ಟೈ(ಪುರನಾರಾರುಪ್ಪಾಡೈ)- ಪುರಂ (ಗಾಯಕರಿಗೆ) ಮಾರ್ಗದರ್ಶನ (ಮುತ್ತಂಕಣ್ಣಿಯಾರ್)

(೩) ಚಿರುಪಾಣಾರ್ರುಪ್ಪಾಟ್ಟೈ(ಚಿರುಪ್ಪಾಣಾರ್ರುಪ್ಪಾಡೈ)- ಕಿರಿಯ ಪಾಣಾರ್' ಗಳಿಗೆ ಮಾರ್ಗದರ್ಶನ (ನತ್ತಣ್ಣನಾರ್)

(೪) ಪೆರುಂಪಾಣಾರ್ರುಪ್ಪಾಟ್ಟೈ (ಪೆರುಂಪಾಣಾರ್ರುಪ್ಪಾಡೈ)-ಹಿರಿಯ ಪಾಣಾರ್' ಗಳಿಗೆ ಮಾರ್ಗದರ್ಶನ (ಉರುತಿರಂಕಣ್ಣನಾರ್)

(೫) ಮುಲ್ಲೈಪ್ಪಾಟ್ಟು-ಕಾಡಿನ ಹಾಡು (ನಾಪ್ಪೋತ್ತನಾರ್)

(೬) ಮಧುರೈಕಾಂಚಿ-ಮಧುರೈಪ್ರತಿಬಿಂಬ (ಮಾನ್ಮುಡಿ ಮರುದನಾರ್)

(೭) ನೆಟುನಳವಾಟೈ(ನೆಡುನಳವಾಡೈ)- ನಿಡಿದಾದ ಒಳ್ಳೆಯ ಬಡಗುಗಾಳಿ (ನಕ್ಕೀರಾರ್)

(೮) ಕುರಿಂಚಿಪ್ಪಾಟ್ಟು-ಕುರಿಂಜಿ ಹಾಡು (ಕಪಿಲಾರ್)

(೯) ಪತ್ತಿನ ಪಾಳೈ-ಪಟ್ಟಣದ ಪಾಳು (ವಿರಹ) (ಉರುತ್ತಿರಂ ಕಣ್ಣನಾರ್)

(೧೦) ಮಲೈಪಾಟ್ಟುಕಟುಂ(ಮಲೈಪಾಟ್ಟುಕಡಂ)-ಮಲೆಯ ಹಾಡಿನ (ಸದ್ದು ? )(ಪೆರುಂ ಕೌಶಿಕನಾರ್)

ಇ. ಪದಿನೇಣ್ ಕೀೞ್ಕಣಕ್ಕು ( ಹದಿನೆಂಟು ಸಣ್ಣ ಕೃತಿಗಳು)

(೧) ಕಳವಳಿ ನಾಳ್ಪ ದು-ಕಾಳಗದ ನಾನೂರು (ಪದ್ಯಗಳು)

(೨) ಕಾರ್' ನಾಳ್ಪದು-ಮಳೆಯ ನಾನೂರು (ಪದ್ಯಗಳು)

(೩) ಐನ್'ತಿಣೈ ಎಳುಪುದು -ಐದು ತಿಣೈಗಳ ಎಪ್ಪತ್ತು (ಪದ್ಯಗಳು)

(೪) ಐನ್‌ತಿಣೈ ಐಂಬದು -ಐದು ತಿಣೈಗಳ ಐವತ್ತು (ಪದ್ಯಗಳು)

(೫) ತಿಣೈಮೊಳಿ ಐಂಬದು –ತಿಣೈನುಡಿಯ ಐವತ್ತು (ಪದ್ಯಗಳು)

(೬) ತಿಣೈಮಾಲೈ ನೂಟ್ರೈಂಬದು –ತಿಣೈಮಾಲೆಯ ನೂರ ಐವತ್ತು (ಪದ್ಯಗಳು)

(೭) ಇನ್ನಿಲೈ(ಕೈನಿಲ್ಲೈ)-ನಡವಳಿಕೆಗಳು ಐದು

(೮) ತಿರಿಕಡಿಗಂ-ಮೂರು ಕಟುಕುಗಳು(3 ಸೂಕ್ತಿಗಳ ಕಟ್ಟಿನ 101 ಚೌಪದಿಗಳು )

(೯) ನಾನ್‌ಮಣಿಕ್ಕಡಿಗೈ-ನಾಲ್ಕುಮಣಿಕಟುಕುಗಳು (4 ಸೂಕ್ತಿಗಳ ಕಟ್ಟಿನ 104 ಚೌಪದಿಗಳು )

(೧೦) ಚಿರುಪಂಚಮೂಲಂ-ಸಣ್ಣ ಐದುಮೂಲಗಳು ( 5 ಸೂಕ್ತಿಗಳ ಕಟ್ಟಿನ 98 ಪದ್ಯಗಳು)

(೧೧) ಏಲಾದಿ-ಏಲಕ್ಕಿ ಮತ್ತು ಇತರ (6 ಅಂಶಗಳ ಕಟ್ಟಿನ 82 ಚೌಪದಿಗಳು)

(೧೨) ಮುದುಮೊಳಿಕಾಂಚಿ-ಹಿರಿಯ ನುಡಿಗಳ ಪ್ರತಿಬಿಂಬ (10 ಸೂಕ್ತಿಗಳ ಕಟ್ಟಿನ 10 ಪ್ರಕರಣಗಳು)

(೧೩) ಇನ್ನಾ ನಾಳ್ಪದು –ಅಹಿತದ ನಲವತ್ತು (ಚೌಪದಿಗಳು)

(೧೪) ಇನ್ನಿವಯ್ ನಾಳ್ಪದು – ಇನಿದಾದ ನಲವತ್ತು (ಚೌಪದಿಗಳು)

(೧೫) ಆಚಾರಕ್ಕೋವೈ-ಆಚಾರ ಸಂಹಿತೆ ( ನೂರು ಪದ್ಯಗಳು)

(೧೬) ಪಳಮೊಳಿ ನಾನೂರು-ಹಳೆನುಡಿಗಳು ನಾನೂರು ( ಒಂದು ಗಾದೆಯಿರುವ 400 ಚೌಪದಿಗಳು)

(೧೭) ನಾಲಡಿಯಾರ್-ನಾಲ್ಕರ ಕವಿತೆಗಳು (400 ಚೌಪದಿಗಳು)

(೧೮) ಶ್ರೀ ಕುರುಳು (1330 ದ್ವಿಪದಿಗಳು)

ಈ. ಇಳಂಗೊ ಅಡಿಗಳ್ ಬರೆದಿರುವ ಶಿಲಪ್ಪದಿಗಾರಂ(ಶಿಲಪ್ಪಧಿಕಾರಂ) ಮತ್ತು ಸತ್ತನಾರ್ ಬರೆದಿರುವ ಮಣಿಮೇಗಲೈ (ಮಣಿಮೆಖಲೆ) ಕಾವ್ಯಗಳು

ಸಾಹಿತ್ಯದ ಸ್ವರೂಪ

ಸಂಗಂ ಸಾಹಿತ್ಯ ಅಹಂ ಮತ್ತು ಪುರಂ ಎಂಬ ಎರಡು ಪರಿಕಲ್ಪನೆಗಳಲ್ಲಿ ರಚಿತವಾಗಿದೆ. ಅಹಂ ಮಾನವನ ಪ್ರೀತಿ,ಪ್ರಣಯ,ಭಯ,ಹತಾಶೆಗಳಂತಹ ಆಂತರಿಕ ಭಾವನೆಗಳಿಗೆ ವಾಹಕವಾದರೆ ಪುರಂ ಸಮಾಜ,ಸಂಸ್ಕೃತಿ,ರಾಜಕೀಯ ಸ್ಥಿತಿಗತಿಗಳನ್ನು ಕುರಿತಾಗಿದೆ.

ಸಂಗಂ ಸಾಹಿತ್ಯ 75% ಅಹಂ ಮತ್ತು ಉಳಿದ 25% ಪುರಂ ಮಾರ್ಗಗಳಲ್ಲಿ ಹಂಚಿಕೆಯಾಗಿದೆ. ಅಹಂ ಸಾಹಿತ್ಯದಲ್ಲಿ ತಲೈವನ್/ಕಿಳವನ್(ನಾಯಕ), ತಲೈವಿ/ಕಿಳಟ್ಟಿ (ನಾಯಕಿ) ,ಪಾಂಗನ್ (ನಾಯಕನ ಜೊತೆಗಾರ), ತೊಲಿ/ಪಾಂಕಿ (ನಾಯಕಿಯ ಜೊತೆಗಾತಿ) ,ನಾರ್ರ (ತಾಯಿ/ಮಲತಾಯಿ),

ಪಾರಟ್ಟೈ/ಕಿಳಟ್ಟಿ (ಸಭಿಕ/ಕೇಳುಗ) ಪ್ರಧಾನ ಭೂಮಿಕೆಯಲ್ಲಿರುತ್ತಾರೆ. ನಾಯಕ/ನಾಯಕಿ ಸ್ವಗತದಲ್ಲಿ ಕೇಳುಗರಿಗೆ ತಮ್ಮ ಭಾವನೆಗಳನ್ನು ತಿಳಿಸುತ್ತಾರೆ.

ಸಂಗಂ ಸಾಹಿತ್ಯ ಯಾರಿಂದ ರಚನೆಗೊಂಡಿದೆ ಎಂಬುದರ ಬಗ್ಗೆ ವಿದ್ವಾಂಸರು ನೀಡುವ ಅಭಿಪ್ರಾಯ ಕೆಳಕಂಡಂತಿದೆ

ತಮಿಳಿನ ಆರಂಭಿಕ ಸಾಹಿತ್ಯ ಜನಸಾಮಾನ್ಯರಿಂದ ಸೃಜಿತಗೊಂಡಿರುವ ಎಲ್ಲಾ ವರ್ಗಗಳ ಪ್ರಾತಿನಿಧಿಕ ಸಾಹಿತ್ಯ. ಸಂಗಂ ಸಾಹಿತ್ಯದ ಸೃಜನೆಯಲ್ಲಿ ಕಮ್ಮಾರ, ಚಮ್ಮಾರ, ಬಡಗಿಯಂತಹ ಸಾಮಾನ್ಯರು, ರಾಜರುಗಳು, ಪ್ರತಿಷ್ಟಿತರು ಸೇರಿದ್ದಾರೆ.

*****